45

ಪ್ರವಾದಿ ಪ್ರೇಮ



الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014
MOB: 9731593091 / 9945171612

ಅನಸ್(ರ) ರಿಂದ: ಪ್ರವಾದಿ(ಸ) ಹೇಳಿದರು: "ನೀವು ನಿಮ್ಮ ತಂದೆ-ತಾಯಿ, ಮಕ್ಕಳು ಮತ್ತು ಇತರೆಲ್ಲ ಜನರಿಗಿಂತ ಹೆಚ್ಚು ನನ್ನನ್ನು ಪ್ರೀತಿಸುವ ತನಕ ನಿಮ್ಮಲ್ಲಿ ಯಾರೂ ಸತ್ಯವಿಶ್ವಾಸಿಗಳಾಗುವುದಿಲ್ಲ."

ಈ ಹದೀಸಿನಲ್ಲಿರುವ 'ಸತ್ಯವಿಶ್ವಾಸಿಗಳಾಗುವುದಿಲ್ಲ' ಎಂಬ ಪದವನ್ನು ವಿವರಿಸುತ್ತಾ ಇಬ್ನ್ ಬತ್ತಾಲ್(ರ) ಹೇಳುತ್ತಾರೆ: "ಅಂದರೆ ನಿಮ್ಮಲ್ಲಿ ಯಾರೂ ಸತ್ಯವಿಶ್ವಾಸದ ನಿಜಸ್ಥಿತಿಯನ್ನು ಮತ್ತು ಉನ್ನತ ಸ್ಥಾನವನ್ನು ತಲುಪುವುದಿಲ್ಲ."

ಹಾಫಿಝ್ ಇಬ್ನ್ ಹಜರ್(ರ) ಹೇಳುತ್ತಾರೆ: "ಸತ್ಯವಿಶ್ವಾಸಿಗಳಾಗುವುದಿಲ್ಲ ಎಂದರೆ ಪೂರ್ಣರೂಪದಲ್ಲಿರುವ ಸತ್ಯವಿಶ್ವಾಸಿಗಳಾಗುವುದಿಲ್ಲ."

ಶೈಖ್ ಸಾಲಿಹ್ ಅಲ್‌ಫೌಝಾನ್(ರ) ಹೇಳುತ್ತಾರೆ: "ನಿಮ್ಮಲ್ಲಿ ಯಾರೂ ಸತ್ಯವಿಶ್ವಾಸಿಗಳಾಗುವುದಿಲ್ಲ ಎಂಬ ಈ ವಾಕ್ಯವು ವಿಶ್ವಾಸದ ಅಡಿಬೇರನ್ನು ನಿಷೇಧಿಸುವುದಿಲ್ಲ.

ಬದಲಾಗಿ ಅದು ನಿಷೇಧಿಸುವುದು ವಿಶ್ವಾಸದ ಸಂಪೂರ್ಣತೆಯನ್ನು ಮಾತ್ರ. ನಿಮ್ಮಲ್ಲಿ ಯಾರೂ ಪೂರ್ಣರೂಪದಲ್ಲಿರುವ ಸತ್ಯವಿಶ್ವಾಸಿಗಳಾಗುವುದಿಲ್ಲ ಎನ್ನುವುದು ಇದರ ಅರ್ಥವಾಗಿದೆ. ಒಬ್ಬ ವ್ಯಕ್ತಿ ಪ್ರವಾದಿ(ಸ) ರನ್ನು ಪ್ರೀತಿಸುತ್ತಾನೆ, ಆದರೆ ಇತರರಲ್ಲಿರುವ ಪ್ರೀತಿಗಿಂತ ಹೆಚ್ಚು ಆ ಪ್ರೀತಿಗೆ ಪ್ರಾಮುಖ್ಯತೆ ನೀಡುವುದಿಲ್ಲವೆಂದಾದರೆ ಅವನು ಪೂರ್ಣ ರೂಪದಲ್ಲಿರುವ ಸತ್ಯವಿಶ್ವಾಸಿಯಾಗುವುದಿಲ್ಲ.

ಆದರೆ ಒಬ್ಬ ವ್ಯಕ್ತಿ ಪ್ರವಾದಿ(ಸ) ರನ್ನು ಪ್ರೀತಿಸುವುದೇ ಇಲ್ಲ, ದ್ವೇಷಿಸುತ್ತಾನೆ ಎಂದಾದರೆ ಅವನು ಸತ್ಯನಿಷೇಧಿಯಾಗಿದ್ದಾನೆ. ಅದೇ ಸಂದರ್ಭ ಒಬ್ಬ ವ್ಯಕ್ತಿ ಪ್ರವಾದಿ(ಸ) ರನ್ನು ಪ್ರೀತಿಸುತ್ತಾನೆ, ಆದರೆ ಅವನಿಗೆ ಅದಕ್ಕಿಂತಲೂ ಹೆಚ್ಚು ಪ್ರೀತಿ ಅವನ ತಂದೆ-ತಾಯಿ, ಮಕ್ಕಳಲ್ಲಿದ್ದರೆ ಅವನು ಪೂರ್ಣ ರೀತಿಯಲ್ಲಿರುವ ಸತ್ಯವಿಶ್ವಾಸಿಯಾಗುವುದಿಲ್ಲ. ತಮ್ಮ ದೇಹಕ್ಕಿಂತಲೂ, ತಮ್ಮ ದೇಹದ ಒಂದು ಭಾಗವಾದ ಮಕ್ಕಳಿಗಿಂತಲೂ, ಜನ್ಮ ನೀಡಿ ಬೆಳೆಸಿದ

ತಂದೆ-ತಾಯಿಗಿಂತಲೂ ಮತ್ತು ಇತರೆಲ್ಲ ಜನರಿಗಿಂತಲೂ ಹೆಚ್ಚು ಪ್ರವಾದಿ(ಸ) ರನ್ನು ಪ್ರೀತಿಸುವ ತನಕ ಯಾರೂ ಪೂರ್ಣ ಸತ್ಯವಿಶ್ವಾಸಿಯಾಗುವುದಿಲ್ಲ."

ಈ ಹದೀಸಿನ ಕೆಲವು ವೈಶಿಷ್ಟ್ಯಗಳು:

ಇಸ್ಲಾಂ ಧರ್ಮವು ನೆಲೆನಿಂತಿರುವ ಒಂದು ಮಹಾ ತತ್ವ-ಸಿದ್ಧಾಂತವನ್ನು ಈ ಹದೀಸ್ ವಿವರಿಸುತ್ತದೆ. ಯಾವುದೇ ಸಹಭಾಗಿಗಳಿಲ್ಲದ ಏಕೈಕನಾದ ಅಲ್ಲಾಹನನ್ನು ಆರಾ-ಧಿಸಲು ನಮಗೆ ಆಜ್ಞಾಪಿಸಲಾಗಿರುವಂತೆಯೇ, ನಮ್ಮ ಪ್ರವಾದಿಯನ್ನು, ಅವರು ಮಾತು ಮತ್ತು ಆಜ್ಞೆಗಳನ್ನು ಅನುಸರಿಸಲು ಸಹ ನಮಗೆ ಆಜ್ಞಾಪಿಸಲಾಗಿದೆ. ಇದು ಪ್ರೀತಿಯ ಅನಿವಾರ್ಯತೆಗಳಲ್ಲಿ ಒಂದಾಗಿದೆ.

ಹಾಫಿಝ್ ಇಬ್ನ್ ರಜಬ್(ರ) ತಮ್ಮ ಫತ್‌ಹುಲ್ ಬಾರಿ ಎಂಬ ಗ್ರಂಥದಲ್ಲಿ ಹೇಳುತ್ತಾರೆ: "ಪ್ರವಾದಿ(ಸ) ರನ್ನು ಪ್ರೀತಿಸುವುದು ಸತ್ಯವಿಶ್ವಾಸದ (ಈಮಾನಿನ) ಮೂಲ-

ತತ್ವಗಳಲ್ಲಿ ಒಂದಾಗಿದ್ದು ಅದನ್ನು ಅಲ್ಲಾಹನ ಪ್ರೀತಿಯೊಂದಿಗೆ ಜೋಡಿಸಲಾಗಿದೆ. ತಾನು ಸ್ವಾಭಾವಿಕವಾಗಿ ಪ್ರೀತಿಸುವ ಆಪ್ತ ಸಂಬಂಧಿಕರು, ಹಣ, ಸಂಪತ್ತು, ಐಶ್ವರ್ಯ, ಮಾತೃಭೂಮಿ ಇತ್ಯಾದಿಗಳಿಗೆ ಪ್ರವಾದಿ(ಸ) ರವರ ಪ್ರೀತಿಗಿಂತಲೂ ಹೆಚ್ಚು ಪ್ರಾಮುಖ್ಯತೆ ನೀಡುವವರಿಗೆ ಎಚ್ಚರಿಕೆ ನೀಡುತ್ತಾ ಅಲ್ಲಾಹು ಹೇಳುತ್ತಾನೆ: “ಹೇಳಿರಿ: ನೀವು ಅಲ್ಲಾಹನಿಗಿಂತ, ಅವನ ಸಂದೇಶವಾಹಕರಿಗಿಂತ ಮತ್ತು ಅವನ ಮಾರ್ಗದಲ್ಲಿರುವ ಹೋರಾಟಕ್ಕಿಂತ ಹೆಚ್ಚು ನಿಮ್ಮ ತಂದೆ-ತಾಯಿ, ಮಕ್ಕಳು, ಸೋದರರು, ಸಂಗಾತಿಗಳು, ನೀವು ಜಮೆ ಮಾಡಿದ ಐಶ್ವರ್ಯ, ನಷ್ಟವಾಗಬಹುದೆಂದು ಹೆದರುವ ವ್ಯಾಪಾರ, ನೀವು ಇಷ್ಟಪಡುವ ನಿಮ್ಮ ವಸತಿಗಳು ಮುಂತಾದವುಗಳನ್ನು ಪ್ರೀತಿಸುವುದಾದರೆ ಅಲ್ಲಾಹು ಅವನ ಆಜ್ಞೆಯನ್ನು ತರುವ ತನಕ ಕಾಯಿರಿ.” (ಅತ್ತೌಬಾ: 24).

ಉಮರ್(ರ) ಪ್ರವಾದಿ(ಸ) ರೊಂದಿಗೆ, ನನ್ನ ದೇಹವನ್ನು

ಬಿಟ್ಟರೆ ಇತರೆಲ್ಲ ವಸ್ತುಗಳಿಗಿಂತ ಹೆಚ್ಚು ನಾನು ತಮ್ಮನ್ನು ಪ್ರೀತಿಸುತ್ತೇನೆ ಎಂದು ಹೇಳಿದಾಗ, ಪ್ರವಾದಿ(ಸ) ರವರು, ಇಲ್ಲ. ಉಮರ್! ತಾವು ತಮ್ಮ ದೇಹಕ್ಕಿಂತಲೂ ಹೆಚ್ಚು ನನ್ನನ್ನು ಪ್ರೀತಿಸುವ ತನಕ ತಾವು ಸತ್ಯವಿಶ್ವಾಸಿಯಾಗುವು-ದಿಲ್ಲ ಎನ್ನುತ್ತಾರೆ. ಉಮರ್(ರ), ಅಲ್ಲಾಹನ ಮೇಲಾಣೆ! ಈಗ ನಾನು ನನ್ನ ದೇಹಕ್ಕಿಂತಲೂ ಹೆಚ್ಚು ತಮ್ಮನ್ನು ಪ್ರೀತಿಸುತ್ತೇನೆ ಎಂದಾಗ ಪ್ರವಾದಿ(ಸ) ಹೇಳುತ್ತಾರೆ: ಓ ಉಮರ್! ಈಗ ತಾವು ಸತ್ಯವಿಶ್ವಾಸಿಯಾಗಿದ್ದೀರಿ."

ಹಾಫಿಝ್ ಇಬ್ನ್ ರಜಬ್(ರ) ಮುಂದುವರಿದು ಹೇಳು-ತ್ತಾರೆ: "ಆದ್ದರಿಂದ, ಸ್ವಶರೀರ, ಮಕ್ಕಳು, ಆಪ್ತ ಸಂಬಂಧಿ-ಕರು, ಕುಟುಂಬಿಕರು, ಆಸ್ತಿ–ಪಾಸ್ತಿ, ವಸತಿ ಮುಂತಾದ ಮನುಷ್ಯರು ಗಾಢವಾಗಿ ಪ್ರೀತಿಸುವ ಎಲ್ಲ ವಸ್ತುಗಳಿಗಿಂ-ತಲೂ ಹೆಚ್ಚು ಪ್ರವಾದಿ(ಸ) ರನ್ನು ಪ್ರೀತಿಸುವುದು ಕಡ್ಡಾ-ಯವಾಗಿದೆ. ಆದರೆ ಯಾವುದೇ ಪ್ರೀತಿ ಪೂರ್ಣವಾಗ-ಬೇಕಾದರೆ ಅನುಸರಣೆ ಇರಬೇಕಾದುದು ಕಡ್ಡಾಯ.

ಏಕೆಂದರೆ ಅಲ್ಲಾಹು ಹೇಳುತ್ತಾನೆ: “ಹೇಳಿರಿ: ನೀವು ಅಲ್ಲಾಹನನ್ನು ಪ್ರೀತಿಸುವುದಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹು ನಿಮ್ಮನ್ನು ಪ್ರೀತಿಸುತ್ತಾನೆ.” (ಆಲು ಇಮ್ರಾನ್: 31)

ಪ್ರೀತಿಯ ಬಗ್ಗೆ ಒಬ್ಬ ವಿದ್ವಾಂಸರಲ್ಲಿ ಕೇಳಲಾದಾಗ ಅವರು ಹೇಳುತ್ತಾರೆ: ಪ್ರೀತಿ ಎಂದರೆ ನೀನು ಯಾರನ್ನು ಪ್ರೀತಿಸುತ್ತೀಯೋ ಅವರೊಂದಿಗೆ ನಿನ್ನ ಎಲ್ಲ ಸ್ಥಿತಿಗಳಲ್ಲೂ ಹೊಂದಾಣಿಕೆಯಾಗುವುದು. (ಅಂದರೆ ನಿನ್ನ ಜೀವನವನ್ನು ಅವರ ಜೀವನದೊಂದಿಗೆ ಸಮೀಕರಿಸುವುದು) ಆದ್ದರಿಂದ ಪ್ರವಾದಿ(ಸ) ರಲ್ಲಿರುವ ನಿಜವಾದ ಪ್ರೀತಿಯ ಚಿಹ್ನೆ ಏನೆಂದರೆ: ಪ್ರವಾದಿ(ಸ) ರವರ ಆಜ್ಞೆ ಮತ್ತು ತಾನು ಪ್ರೀತಿಸುವ ಬೇರೊಂದು ವಸ್ತುವಿನ ಆಯ್ಕೆ ಬರುವಾಗ, ಆ ವಸ್ತುವನ್ನು ಬಿಟ್ಟು ಪ್ರವಾದಿ(ಸ) ರವರ ಆಜ್ಞೆಯನ್ನು ಪಾಲಿಸಲು ಮುತುವರ್ಜಿ ನೀಡುವುದಾದರೆ ಅದು ನಿಜವಾದ ಪ್ರವಾದಿಪ್ರೇಮವಾಗಿದೆ. ಆದರೆ ಪ್ರವಾದಿ(ಸ)

ರವರ ಆಜ್ಞಾಪಾಲನೆ ಮಾಡುವುದು ಬಿಟ್ಟು ತಾನು ಪ್ರೀತಿಸುವ ಆ ವಸ್ತುವಿಗೆ ಪ್ರಾಮುಖ್ಯತೆ ನೀಡುವವರು ಪೂರ್ಣ ರೂಪದ ಸತ್ಯವಿಶ್ವಾಸಿಯಲ್ಲ."

ಇಮಾಂ ಅನ್ನವವೀ(ರ) ಹೇಳುತ್ತಾರೆ: "ಇಮಾಂ ಅಬೂ ಸುಲೈಮಾನ್ ಅಲ್‌ಖತ್ತಾಬೀ(ರ) ಹೇಳುತ್ತಾರೆ: ಇಲ್ಲಿ ಉದ್ದೇಶಿಸಿದ್ದು ಸ್ವಾಭಾವಿಕ ಪ್ರೀತಿಯನ್ನಲ್ಲ. ಸ್ವಯಂಪ್ರೇರಿತ ಪ್ರೀತಿಯನ್ನು. ಏಕೆಂದರೆ ಮನುಷ್ಯನು ತನ್ನ ದೇಹವನ್ನು ಪ್ರೀತಿಸುವುದು ಸ್ವಾಭಾವಿಕ. ಅದನ್ನು ತಿರಸ್ಕರಿಸಲಾಗದು. ಈ ಹದೀಸಿನ ಅರ್ಥವೇನೆಂದರೆ: ನೀನು ನಿನ್ನ ದೇಹವನ್ನು ನನ್ನ ಅನುಸರಣೆಯಲ್ಲಿ ವಿಲೀನಗೊಳಿಸುವ ತನಕ ಮತ್ತು ನಿನ್ನ ದೇಹದ ಬಯಕೆಗಿಂತಲೂ ನನ್ನ ಅನುಸರಣೆಗೆ ಪ್ರಾಮುಖ್ಯತೆ ನೀಡುವ ತನಕ ನೀನು ನಿಜರೂಪದಲ್ಲಿ ನನ್ನನ್ನು ಪ್ರೀತಿಸಿಲ್ಲ. ಇದು ಅಲ್‌ಖತ್ತಾಬೀ(ರ) ಯವರ ಅಭಿಪ್ರಾಯ. ಇಬ್ನ್ ಬತ್ತಾಲ್(ರ), ಅಲ್‌ಕಾದೀ ಇಯಾದ್(ರ) ಮುಂತಾದವರು ಹೇಳುತ್ತಾರೆ: ಪ್ರೀತಿ

ಮೂರು ವಿಧಗಳಲ್ಲಿದೆ: ಗೌರವಾದರಗಳಿರುವ ಪ್ರೀತಿ. ಉದಾ: ತಂದೆ-ತಾಯಿಗಳಲ್ಲಿರುವ ಪ್ರೀತಿ. ಅನುಕಂಪ ದಯೆಗಳಿರುವ ಪ್ರೀತಿ. ಉದಾ: ಮಕ್ಕಳಲ್ಲಿರುವ ಪ್ರೀತಿ. ಅನುಕರಣೆ, ಸದ್ಭಾವನೆಗಳಿರುವ ಪ್ರೀತಿ. ಉದಾ: ಇತರ ಮನುಷ್ಯರಲ್ಲಿರುವ ಪ್ರೀತಿ. ಪ್ರವಾದಿ(ಸ) ರವರು ತಮ್ಮ ಪ್ರೀತಿಯಲ್ಲಿ ಇವು ಮೂರನ್ನೂ ಸೇರಿಸಿದ್ದಾರೆ.

ಇಬ್ನ್ ಬತ್ತಾಲ್(ರ) ಹೇಳುತ್ತಾರೆ: ತಂದೆ-ತಾಯಿ, ಮಕ್ಕಳು ಮತ್ತು ಇತರೆಲ್ಲ ಜನರ ಹಕ್ಕಿಗಿಂತಲೂ ಪ್ರವಾದಿ(ಸ) ರ ಹಕ್ಕು ಹೆಚ್ಚು ಪ್ರಬಲವಾಗಿದೆ. ಏಕೆಂದರೆ ನಾವು ನರಕ-ದಿಂದ ಪಾರಾಗಿರುವುದು ಮತ್ತು ಪಥಭ್ರಷ್ಟತೆಯಿಂದ ಸನ್ಮಾರ್ಗಕ್ಕೆ ಬಂದಿರುವುದು ಪ್ರವಾದಿ(ಸ) ರವರ ಮೂ-ಲಕವಾಗಿದೆ."

ಆದ್ದರಿಂದ ಒಬ್ಬ ಮುಸಲ್ಮಾನನು ತನ್ನ ತಂದೆ-ತಾಯಿ, ಮಕ್ಕಳು, ಸಂಪತ್ತು ಮುಂತಾದ ತಾನು ಪ್ರೀತಿಸುವ ಎಲ್ಲ-ಕ್ಕಿಂತ ಹೆಚ್ಚು ಪ್ರವಾದಿ(ಸ) ರನ್ನು ಪ್ರೀತಿಸಬೇಕು. ತನ್ನ ಆಪ್ತ

ಸಂಬಂಧಿಕರಿಗಿಂತಲೂ ಹೆಚ್ಚು ಆಪ್ತರಾದ, ತನಗೆ ಇಸ್ಲಾಂ ಎಂಬ ಅನುಗ್ರಹ ಸಿಗಲು ಕಾರಣಕರ್ತರಾದ ಪ್ರವಾದಿ(ಸ) ರಿಗೆ ಇತರ ಜನರಿಗಿಂತ ಹೆಚ್ಚು ಪ್ರಾಮುಖ್ಯತೆ ನೀಡುವುದು ಕಡ್ಡಾಯವಾಗಿದೆ. ಈ ಮಹಾ ಅನುಗ್ರಹವನ್ನು ಇತರ ಯಾವುದೇ ಅನುಗ್ರಹಗಳೊಂದಿಗೆ ಹೋಲಿಸಲಾಗದು. ಇಹಲೋಕ–ಪರಲೋಕದಲ್ಲಿ ಮನುಷ್ಯನ ಯಶಸ್ಸು ಅಡಗಿರುವುದು ಇದರಲ್ಲೇ.

ಶೈಖ್ ಮುಹಮ್ಮದ್ ಇಬ್ನ್ ಸಾಲಿಹ್ ಅಲ್‌ಉಸೈಮೀನ್(ರ) ಹೇಳುತ್ತಾರೆ: "ಇತರೆಲ್ಲ ಜನರಿಗಿಂತಲೂ, ತಂದೆ-ತಾಯಿ, ಮಕ್ಕಳು, ಕುಟುಂಬಿಕರು, ಸಂಪತ್ತು, ದೇಹ ಮುಂತಾದವುಗಳಿಗಿಂತಲೂ ಹೆಚ್ಚು ಪ್ರವಾದಿ(ಸ) ರನ್ನು ಪ್ರೀತಿಸಬೇಕಾದುದು ಕಡ್ಡಾಯ. ಆದರೆ ಈ ವಿಧದಲ್ಲಿ ಪ್ರವಾದಿ(ಸ) ರನ್ನು ಪ್ರೀತಿಸುವುದು ಹೇಗೆ? ಇದರ ಚಿಹ್ನೆಯೇನು?

ಉತ್ತರ: ನೀನು ನಿನ್ನ ಮನಸ್ಸಿನ ಆಸೆಗಿಂತಲೂ ಹೆಚ್ಚು

ಪ್ರವಾದಿ(ಸ) ರವರ ಆಜ್ಞೆಗೆ ಪ್ರಾಮುಖ್ಯತೆ ನೀಡುವುದು ಇದರ ಚಿಹ್ನೆಯಾಗಿದೆ. ನೀನು ಪ್ರವಾದಿ(ಸ) ರನ್ನು ನಿನ್ನ ದೇಹಕ್ಕಿಂತಲೂ ಹೆಚ್ಚು ಪ್ರೀತಿಸುತ್ತಿರುವಿ ಎನ್ನುವುದ-ಕ್ಕೆ ಇದು ಬಲುದೊಡ್ಡ ಪುರಾವೆಯಾಗಿದೆ. ಪ್ರವಾದಿ-(ಸ) ರವರ ಒಂದು ಆಜ್ಞೆಯನ್ನು ಅನುಸರಿಸಲು ನಿನ್ನ ದೇಹ ಅಸಮ್ಮತಿ ಸೂಚಿಸುವಾಗ, ಅಥವಾ ಪ್ರವಾದಿ(ಸ) ರವರು ವಿರೋಧಿಸಿದ ಒಂದು ನಿಷಿದ್ಧವನ್ನು ಮಾಡಲು ನಿನ್ನ ದೇಹ ಮುಂದಾಗುವಾಗ, ನೀನು ನಿನ್ನ ದೇಹಕ್ಕೆ ಕಡಿವಾಣ ಹಾಕಿ ಪ್ರವಾದಿ(ಸ) ರಿಗೆ ಪ್ರಾಮುಖ್ಯತೆ ನೀ-ಡುವುದಾದರೆ ನೀನು ನಿನ್ನ ದೇಹಕ್ಕಿಂತಲೂ ಹೆಚ್ಚು ಪ್ರವಾದಿ(ಸ) ರನ್ನು ಪ್ರೀತಿಸುತ್ತಿರುವೆ. ಏಕೆಂದರೆ ನೀನು ನಿನ್ನ ದೇಹವನ್ನು ಹಿಂಬಾಲಿಸದೆ ಪ್ರವಾದಿ(ಸ) ರವರನ್ನು ಹಿಂಬಾಲಿಸಿದ್ದು ಆ ಪ್ರೀತಿಯಿಂದಾಗಿದೆ.

ಕರ್ಮ, ಗುಣಸ್ವಭಾವ ಮುಂತಾದವುಗಳಲ್ಲಿ ಪ್ರವಾದಿ-(ಸ) ರನ್ನು ಅನುಸರಿಸುವಾಗ ತಾನು ಪ್ರವಾದಿ(ಸ) ರನ್ನು

ಅನುಸರಿಸುತ್ತಿದ್ದೇನೆಂಬ ಪ್ರಜ್ಞೆಯನ್ನು ಹೆಚ್ಚು ಹೆಚ್ಚು ಜ್ಞಾಪಕಕ್ಕೆ ತರಬೇಕು. ಏಕೆಂದರೆ ಅದರಿಂದ ಪ್ರವಾದಿ-(ಸ) ರಲ್ಲಿರುವ ಪ್ರೀತಿ ಹೆಚ್ಚಾಗುತ್ತದೆ. ಉದಾ: ವುದೂ, ನಮಾಝ್, ಉಪವಾಸ ಮುಂತಾದ ಆರಾಧನೆಗಳ-ನ್ನು ನಿರ್ವಹಿಸುವಾಗ, ಅದೇ ರೀತಿ ಉದಾತ್ತ ಗುಣಗಳ ಮೂಲಕ ಇತರರೊಡನೆ ವ್ಯವಹರಿಸುವಾಗ, ಜನರಿಗೆ ಸಹಾಯ ಮಾಡುವಾಗ, ತಾನು ಪ್ರವಾದಿ(ಸ) ರನ್ನು ಅನುಸರಿಸುತ್ತಿದ್ದೇನೆಂಬ ಪ್ರಜ್ಞೆ ನಿಮ್ಮಲ್ಲಿ ಮೂಡುವುದಾ-ದರೆ ಅದು ನಿಮ್ಮ ಪ್ರವಾದಿ ಪ್ರೇಮವನ್ನು ಹೆಚ್ಚಿಸುವುದು ಮಾತ್ರವಲ್ಲದೆ, ನಿಮ್ಮನ್ನು ಪೂರ್ಣರೂಪದಲ್ಲಿ ಪ್ರವಾದಿ(ಸ) ರ ಅನುಯಾಯಿಯಾಗಿ ಮಾರ್ಪಡಿಸುತ್ತದೆ."

ಪ್ರವಾದಿ ಪ್ರೇಮವು ಅಹ್ಲುಸ್ಸುನ್ನತ್ತಿನ ಮೂಲತತ್ವಗಳ-ಲ್ಲೊಂದಾಗಿದೆ

ಶೈಖ್ ಸಾಲಿಹ್ ಅಲ್‌ಫೌಝಾನ್(ರ) ಹೇಳುತ್ತಾರೆ: "ಪ್ರವಾದಿ(ಸ) ರನ್ನು ಪ್ರೀತಿಸುವುದು ಕಡ್ಡಾಯವಾಗಿದೆ,

ಅಲ್ಲಾಹನ ನಂತರ ಇತರೆಲ್ಲರಿಗಿಂತಲೂ ಹೆಚ್ಚು ಪ್ರವಾದಿ(ಸ) ರನ್ನು ಪ್ರೀತಿಸಬೇಕಾಗಿದೆಯೆಂದು ಈ ಹದೀಸಿನಲ್ಲಿದೆ. ಕಾರಣ ಪ್ರವಾದಿ ಪ್ರೇಮವು ಅಲ್ಲಾಹನಲ್ಲಿರುವ ಪ್ರೀತಿಯ ಉಪಾಂಗವೂ ಅನಿವಾರ್ಯ ಘಟಕವೂ ಆಗಿದೆ. ಏಕೆಂದರೆ ಅದು ಅಲ್ಲಾಹನ ಮತ್ತು ಅಲ್ಲಾಹನಿಗೋಸ್ಕರ ಇರುವ ಪ್ರೀತಿಯಾಗಿದೆ. ಸತ್ಯವಿಶ್ವಾಸಿಯ ಹೃದಯದಲ್ಲಿ ಅಲ್ಲಾಹನ ಪ್ರೀತಿಯು ಹೆಚ್ಚಾದಂತೆ ಪ್ರವಾದಿ ಪ್ರೇಮ ಕೂಡ ಹೆಚ್ಚಾಗುತ್ತದೆ. ಅದು ಕಡಿಮೆಯಾದಂತೆ ಇದು ಕೂಡ ಕಡಿಮೆಯಾಗುತ್ತದೆ. ಅಲ್ಲಾಹನನ್ನು ಪ್ರೀತಿಸುವವರೆಲ್ಲರೂ ಅಲ್ಲಾಹನಲ್ಲಿರುವ ಪ್ರೀತಿ ಮತ್ತು ಅಲ್ಲಾಹನಿಗೋಸ್ಕರ ಇರುವ ಪ್ರೀತಿಯಿಂದ ಅಲ್ಲಾಹನನ್ನು ಪ್ರೀತಿಸುತ್ತಾರೆ. ಪ್ರವಾದಿಯನ್ನು ಪ್ರೀತಿಸಬೇಕಾದರೆ ಪ್ರವಾದಿ(ಸ) ರನ್ನು ಆದರಿಸುವುದು, ಗೌರವಿಸುವುದು, ಇತರೆಲ್ಲರ ಮಾತಿಗಿಂತ ಅವರ ಮಾತಿಗೆ ಪ್ರಾಮುಖ್ಯತೆ ನೀಡುವುದು ಮತ್ತು ಅವರ ಸುನ್ನತ್ತನ್ನು ಅನುಸರಿಸು-

ವುದು ಅನಿವಾರ್ಯವಾಗಿದೆ.

ಅಲ್ಲಾಮಾ ಇಬ್ನುಲ್ ಕಯ್ಯಿಂ(ರ) ಹೇಳುತ್ತಾರೆ: ಒಬ್ಬ ವ್ಯಕ್ತಿಯನ್ನು ಪ್ರೀತಿಸುವುದು ಮತ್ತು ಗೌರವಿಸುವುದು ಸಮ್ಮತಾರ್ಹವಾಗಿರುವುದು ಅದು ಅಲ್ಲಾಹನ ಪ್ರೀತಿ ಮತ್ತು ಗೌರವವನ್ನು ಅನುಸರಿಸಿಕೊಂಡಾಗಿದ್ದರೆ ಮಾತ್ರ. ಪ್ರವಾದಿ(ಸ) ರನ್ನು ಪ್ರೀತಿಸುವುದು ಮತ್ತು ಗೌರವಿಸುವುದು ಅವರನ್ನು ಕಳುಹಿಸಿದ ಅಲ್ಲಾಹನಲ್ಲಿರುವ ಪ್ರೀತಿ ಮತ್ತು ಗೌರವದ ಸಂಪೂರ್ಣತೆಯಾಗಿದೆ. ಏಕೆಂದರೆ ಪ್ರವಾದಿ(ಸ) ರ ಸಮುದಾಯವು ಅವರನ್ನು ಪ್ರೀತಿಸುವುದು ಅಲ್ಲಾಹನಲ್ಲಿರುವ ಪ್ರೀತಿಯಿಂದ ಮತ್ತು ಅವರನ್ನು ಗೌರವಿಸುವುದು ಅಲ್ಲಾಹನಲ್ಲಿರುವ ಗೌರವದಿಂದ. ಆದ್ದರಿಂದ ಪ್ರವಾದಿ ಪ್ರೇಮವು ಅಲ್ಲಾಹನ ಪ್ರೀತಿಯನ್ನು ಅನಿವಾರ್ಯಗೊಳಿಸುವ ಪ್ರೀತಿಯಾಗಿದೆ.

ವಾಸ್ತವವಾಗಿ, ಅಲ್ಲಾಹು ಪ್ರವಾದಿ(ಸ) ರಿಗೆ ಘನತೆ ಮತ್ತು ಪ್ರೀತಿಯನ್ನು ದಯಪಾಲಿಸಿದ್ದಾನೆ. ಈ ಕಾರಣದಿಂದಲೇ

ಸಹಾಬಾಗಳ ಹೃದಯದಲ್ಲಿ ಪ್ರವಾದಿ(ಸ) ರಿಗಿಂತಲೂ ಹೆಚ್ಚು ಪ್ರೀತಿ ಮತ್ತು ಗೌರವವುಳ್ಳ ಬೇರೆ ಮನುಷ್ಯರಿರಲಿಲ್ಲ.

ಇಸ್ಲಾಂ ಸ್ವೀಕರಿಸಿದ ಬಳಿಕ ಅಮ್ರ್ ಇಬ್ನುಲ್ ಆಸ್(ರ) ಹೇಳುತ್ತಾರೆ: "ನನಗೆ ಪ್ರವಾದಿ(ಸ) ರ ಮೇಲೆ ಇರುವಷ್ಟು ದ್ವೇಷ ಬೇರೆ ಯಾರ ಮೇಲೂ ಇರಲಿಲ್ಲ. ಆದರೆ ಇಸ್ಲಾಂ ಸ್ವೀಕರಿಸಿದ ಬಳಿಕ ನನಗೆ ಪ್ರವಾದಿ(ಸ) ರಿಗಿಂತ ಹೆಚ್ಚು ಪ್ರೀತಿ ಮತ್ತು ಗೌರವ ಭಾವನೆ ಬೇರೆ ವ್ಯಕ್ತಿಯಲ್ಲಿರಲಿಲ್ಲ. ಆದರೆ ಅವರ ರೂಪವನ್ನು ಬಣ್ಣಿಸಿರಿ ಎಂದು ನೀವು ಹೇಳಿದರೆ ಅದು ನನ್ನಿಂದ ಸುತರಾಂ ಸಾಧ್ಯವಿಲ್ಲ. ಏಕೆಂದರೆ ಅವರಲ್ಲಿರುವ ಗೌರವದ ಕಾರಣ ನಾನು ಅವರನ್ನು ಕಣ್ಣೆತ್ತಿ ನೋಡಲೇ ಇಲ್ಲ." (ಅಲ್‌ಬುಖಾರಿ ಮತ್ತು ಮುಸ್ಲಿಂ)

ಉರ್ವ ಇಬ್ನ್ ಮಸ್‌ಊದ್(ರ) ಕುರೈಶಿಗಳೊಂದಿಗೆ ಹೇಳುತ್ತಾರೆ: "ಓ ನನ್ನ ಜನರೇ! ಅಲ್ಲಾಹನ ಮೇಲಾಣೆ! ನಾನು ಕಿಸ್ರಾ, ಕೈಸರ್ ಮುಂತಾದ ಚಕ್ರವರ್ತಿಗಳ ಬಳಿಗೆ

ರಾಯಭಾರಿಯಾಗಿ ಹೋಗಿದ್ದೇನೆ. ಆದರೆ ಮುಹಮ್ಮದ್(ಸ) ರನ್ನು ಅವರ ಅನುಯಾಯಿಗಳು ಗೌರವಿಸುವಂತೆ ಯಾವುದೇ ಒಬ್ಬ ಸಾಮ್ರಾಟನನ್ನು ಅವನ ಪ್ರಜೆಗಳು ಗೌರವಿಸುವುದಾಗಿ ನಾನು ಕಂಡಿಲ್ಲ.

ಅಲ್ಲಾಹನ ಮೇಲಾಣೆ! ಮುಹಮ್ಮದ್(ಸ) ರ ಮೇಲಿರುವ ಗೌರವದ ಕಾರಣದಿಂದ ಅವರ ಅನುಯಾಯಿಗಳು ಅವರನ್ನು ಕಣ್ಣಿಗೆ ಕಣ್ಣಿಟ್ಟು ನೇರವಾಗಿ ನೋಡುತ್ತಿರಲಿಲ್ಲ. ಅವರು ಕಫ ಉಗುಳುವಾಗ ಅದು ಅನುಯಾಯಿಗಳ ಕೈಯ ಮೇಲೆ ಬಿದ್ದರೆ ಅನುಯಾಯಿಗಳು ಅದನ್ನು ಮುಖ ಮತ್ತು ಎದೆಗೆ ಉಜ್ಜುತ್ತಿದ್ದರು. ಅವರು ವುದೂ ಮಾಡಿ ಮುಗಿಸಿದರೆ ಆ ಬಾಕಿಯುಳಿದ ನೀರಿಗಾಗಿ ಅನುಯಾಯಿಗಳು ಹೋರಾಡುತ್ತಿದ್ದರು." (ಅಲ್‌ಬುಖಾರಿ ಮತ್ತು ಮುಸ್ಲಿಂ)

ಶೈಖ್ ಸಾಲಿಹ್ ಅಲ್‌ಫೌಝಾನ್(ರ) ಹೇಳುತ್ತಾರೆ: "ಇತರ ಜನರ ಆಜ್ಞೆಗಿಂತ ಪ್ರವಾದಿ(ಸ) ರವರ ಆಜ್ಞೆಗೆ

ಪ್ರಾಮುಖ್ಯತೆ ನೀಡಬೇಕೆಂದು ಈ ಹದೀಸ್ ಒತ್ತಿ ಹೇ-ಳುತ್ತದೆ. ಪ್ರವಾದಿ(ಸ) ರವರು ಒಂದು ವಿಷಯವ-ನ್ನು ಆಜ್ಞಾಪಿಸುವಾಗ ಆ ವಿಷಯಕ್ಕೆ ತದ್ವಿರುದ್ಧವಾಗಿ ನಿನ್ನ ತಂದೆ-ತಾಯಿ, ಮಕ್ಕಳು, ಅಥವಾ ಇತರ ಜನರು ಏನಾದರೂ ಆಜ್ಞಾಪಿಸಿದರೆ ಅವರ ಆಜ್ಞೆಯನ್ನು ತಿರಸ್ಕರಿಸಿ ಪ್ರವಾದಿ(ಸ) ರ ಆಜ್ಞೆಯನ್ನು ಅನುಸರಿಸುವುದು ನಿನಗೆ ಕಡ್ಡಾಯವಾಗಿದೆ.

ಏಕೆಂದರೆ ಇತರರಿಗಿಂತಲೂ ಹೆಚ್ಚು ಪ್ರವಾದಿ(ಸ) ರನ್ನು ಪ್ರೀತಿಸುವುದು ಮತ್ತು ಇತರರ ಅನುಸರಣೆಗಿಂತಲೂ ಹೆಚ್ಚು ಪ್ರವಾದಿ(ಸ) ರವರ ಅನುಸರಣೆಗೆ ಪ್ರಾಮುಖ್ಯತೆ ನೀಡುವುದು ಪ್ರವಾದಿ ಪ್ರೇಮದ ಅನಿವಾರ್ಯ ಘಟ-ಕಗಳಾಗಿವೆ. ಪ್ರವಾದಿ(ಸ) ರವರ ಆಜ್ಞೆಗೆ ವಿರುದ್ಧವಾಗಿ ನಡೆಯುವಂತೆ ಯಾರೇ ಆಜ್ಞಾಪಿಸಿದರೂ ಅವರನ್ನು ಅನುಸರಿಸಬಾರದು. ಅವರು ನಿನ್ನ ಆಪ್ತ ಸಂಬಂಧಿಕ-ರಾಗಿದ್ದರೂ ಅಥವಾ ನೀನು ಅತಿಹೆಚ್ಚು ಪ್ರೀತಿಸುವ ವ್ಯ-

ಕ್ತಿಯಾಗಿದ್ದರೂ ಸರಿ.

ಪ್ರವಾದಿ(ಸ) ರವರ ಅನುಸರಣೆಗೆ ಪ್ರಾಮುಖ್ಯತೆ ನೀಡುವುದು ಪ್ರವಾದಿ ಪ್ರೇಮದ ಚಿಹ್ನೆಯಾಗಿದೆ. ಪ್ರವಾದಿ(ಸ) ರವರು ಧರ್ಮನಿಯಮವಾಗಿ ಮಾಡದ ಬಿದ್‌ಅತ್ ಮತ್ತು ನೂತನಾಚಾರಗಳನ್ನು ತೊರೆಯುವುದು ಕೂಡ ಪ್ರವಾದಿ(ಸ) ರನ್ನು ಪ್ರೀತಿಸುವುದರ ಚಿಹ್ನೆಯಾಗಿದೆ. ಏಕೆಂದರೆ, ಪ್ರವಾದಿ(ಸ) ಹೇಳಿದರು: "ನಮ್ಮ ಆಜ್ಞೆಯಿಲ್ಲದ ಒಂದು ಕರ್ಮವನ್ನು ಯಾರಾದರೂ ನಿರ್ವಹಿಸಿದರೆ ಅದು ತಿರಸ್ಕೃತವಾಗಿದೆ." ನಾವು ಪ್ರವಾದಿ(ಸ) ರನ್ನು ಪ್ರೀತಿಸುತ್ತೇವೆಂದು ಹೇಳುತ್ತಾ, ನೂತನಾಚಾರಗಳಾದ ಮೌಲಿದ್ ಮತ್ತು ಮೌಲಿದ್ ಸಮಾರಂಭಗಳನ್ನು ಹಮ್ಮಿಕೊಳ್ಳುವವರು ನಿಜಾರ್ಥದಲ್ಲಿ ಪ್ರವಾದಿ(ಸ) ರನ್ನು ಪ್ರೀತಿಸುವುದೋ ಅನುಸರಿಸುವುದೋ ಮಾಡುತ್ತಿಲ್ಲ. ಕಾರಣ ಪ್ರವಾದಿ(ಸ) ರವರು ಬಿದ್‌ಅತ್‌ಗಳನ್ನು ಮತ್ತು ನೂತನಾಚಾರಗಳನ್ನು ವಿರೋಧಿಸಿದ್ದಾರೆ. ಈ ವಿಷಯದ-

ಲ್ಲಿ ಅವರು ಅನುಸರಿಸುವುದು ಸುಳ್ಳು ಹೇಳಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಸುಳ್ಳುವಾದಿಗಳನ್ನಾಗಿದೆ. ನಾವು ಪ್ರ-ವಾದಿ(ಸ) ರನ್ನು ಪ್ರೀತಿಸುತ್ತಿದ್ದೇವೆಂದು ಅವರು ಹೇ-ಳುತ್ತಿರುವುದು ಸುಳ್ಳು. ಏಕೆಂದರೆ, ಪ್ರವಾದಿ(ಸ) ರವರು ಬಿದ್‌ಅತ್, ನೂತನಾಚಾರ, ಕುರಾಫಾತ್ ಮುಂತಾ-ದವುಗಳನ್ನು ವಿರೋಧಿಸಿದ್ದಾರೆ. ಜನರೆಲ್ಲರೂ ಅದನ್ನು ನಿರ್ವಹಿಸಿದರೂ, ನಿನ್ನ ತಂದೆ-ತಾಯಿ, ಮಕ್ಕಳು, ಆಪ್ತರು ಅದನ್ನು ನಿರ್ವಹಿಸಿದರೂ ನೀನು ಅದನ್ನು ನಿರ್ವಹಿಸ-ಬಾರದು. ಬಿದ್‌ಅತ್‌ಗಳನ್ನು ಮತ್ತು ಪ್ರವಾದಿ(ಸ) ರವರು ವಿರೋಧಿಸಿದ ಕಾರ್ಯಗಳನ್ನು ನಿರ್ವಹಿಸುವ ಜನರನ್ನು ನೀನು ಅನುಸರಿಸಬಾರದು. ನೀನೇನಾದರೂ ಅವರ-ನ್ನು ಅನುಸರಿಸಿದರೆ ಅದು ನೀನು ಪ್ರವಾದಿ(ಸ) ರನ್ನು ನಿಜವಾಗಿ ಪ್ರೀತಿಸುತ್ತಿಲ್ಲ ಎನ್ನುವುದರ ಚಿಹ್ನೆಯಾಗಿದೆ.

ಒಟ್ಟಿನಲ್ಲಿ, ನಾವು ಪ್ರವಾದಿ(ಸ) ರನ್ನು ಪ್ರೀತಿಸುತ್ತೇವೆಂದು ವಾದ ಮಂಡಿಸುವುದು ಅಥವಾ ಮೌಲಿದ್ ಸಮಾರಂಭ

ಹಮ್ಮಿಕೊಳ್ಳುವುದು ಪ್ರವಾದಿ ಪ್ರೇಮವನ್ನು ರುಜುವಾತು ಪಡಿಸುವುದಿಲ್ಲ. ವಾಸ್ತವವಾಗಿ ಪ್ರವಾದಿ(ಸ) ರವರು ಆಜ್ಞಾಪಿಸಿದ್ದನ್ನು ಅನುಸರಿಸುವುದು, ಅವರು ವಿರೋ-ಧಿಸಿದ್ದನ್ನು ತೊರೆಯುವುದು, ಅವರು ತಂದ ಶರೀಅತ್ತಿನ ಮೂಲಕವೇ ಅಲ್ಲಾಹನನ್ನು ಆರಾಧಿಸುವುದು ನಿಜವಾದ ಪ್ರವಾದಿ ಪ್ರೇಮವಾಗಿದೆ. ಇವು ಪ್ರವಾದಿ ಪ್ರೇಮವನ್ನು ರುಜುವಾತು ಪಡಿಸುವ ಪುರಾವೆಗಳಾಗಿವೆ. ನಾನು ಪ್ರ-ವಾದಿ(ಸ) ರನ್ನು ಪ್ರೀತಿಸುತ್ತೇನೆಂದು ವಾದ ಮಂಡಿಸಿದರೆ ಅದು ಪ್ರವಾದಿ ಪ್ರೇಮವಾಗುವುದಿಲ್ಲ.

ಸುನ್ನತ್ತಿನ ಪ್ರಕಾರ ಕರ್ಮವೆಸಗುವುದು ಮತ್ತು ಬಿದ್‌ಅ-ತ್‌ಗಳನ್ನು ತೊರೆಯುವುದು ಪ್ರವಾದಿ ಪ್ರೇಮವನ್ನು ರುಜುವಾತು ಪಡಿಸುವ ಪ್ರಮುಖ ಪುರಾವೆಗಳಾಗಿವೆ. ನಾವು ಪ್ರವಾದಿ(ಸ) ರನ್ನು ಪ್ರೀತಿಸುತ್ತೇವೆಂದು ವಾದಿಸು-ತ್ತಾ, ತಮ್ಮ ಮನಸ್ಸಿಗೆ ತೋಚಿದ್ದನ್ನು ಅಥವಾ ಇತರರು ಹೇಳಿದ್ದನ್ನು ಅಥವಾ ಮಾಡಿದ್ದನ್ನು ಅನುಸರಿಸುತ್ತಾ, ಪ್ರ-

ವಾದಿ(ಸ) ರ ಆಜ್ಞೆಗೆ ವಿರುದ್ಧವಾಗಿ ನಡೆಯುವ, ಅವರು ವಿರೋಧಿಸಿದ್ದನ್ನು ನಿರ್ವಹಿಸುವ, ಅವರು ಆಜ್ಞಾಪಿಸಿದ್ದನ್ನು ತೊರೆಯುವ ಜನರಿಗೆ ನಿಜವಾಗಿಯೂ ಪ್ರವಾದಿ(ಸ) ರಲ್ಲಿ ಪ್ರೀತಿಯಿಲ್ಲ ಎಂದೇ ಹೇಳಬೇಕಾಗಿದೆ.

"ನೀವು ನಿಮ್ಮ ತಂದೆ-ತಾಯಿ, ಮಕ್ಕಳು ಮತ್ತು ಇತರೆಲ್ಲ ಜನರಿಗಿಂತ ಹೆಚ್ಚು ನನ್ನನ್ನು ಪ್ರೀತಿಸುವ ತನಕ ನಿಮ್ಮಲ್ಲಿ ಯಾರೂ ಸತ್ಯವಿಶ್ವಾಸಿಗಳಾಗುವುದಿಲ್ಲ." ತಮ್ಮ ವಿಶ್ವಾಸವನ್ನು ಸ್ವಯಂ ಪರೀಕ್ಷಿಸಲು ಬಯಸುವವರು ಈ ಹದೀಸಿನಲ್ಲಿರುವ ವಿಷಯದತ್ತ ಗಮನಹರಿಸಿ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ನಾನು ನನ್ನ ದೇಹಕ್ಕಿಂತಲೂ ಹೆಚ್ಚು ಪ್ರವಾದಿ(ಸ) ರನ್ನು ಪ್ರೀತಿಸುತ್ತೇನೆಯೇ? ನಾನು ನನ್ನ ತಂದೆ-ತಾಯಿ, ಮಕ್ಕಳು ಮತ್ತು ಇತರೆಲ್ಲ ಜನರಿಗಿಂತ ಹೆಚ್ಚು ಪ್ರವಾದಿ(ಸ) ರನ್ನು ಪ್ರೀತಿಸುತ್ತೇನೆಯೇ? ಎಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಇದರ ಉತ್ತರ ಹೌದೆಂದಾದರೆ ನೀವು ಪ್ರವಾದಿ

ಪ್ರೇಮಿಯಾಗಿದ್ದೀರಿ. ನಾವು ಈಗಾಗಲೇ ಹೇಳಿದಂತೆ ಪ್ರವಾದಿ(ಸ) ರ ಆಜ್ಞೆಗಳನ್ನು ಜಾರಿಗೊಳಿಸುವ ಮೂಲಕ, ಅವರು ವಿರೋಧಿಸಿದ್ದನ್ನು ವರ್ಜಿಸುವ ಮೂಲಕ, ಅವರು ವಿರೋಧಿಸಿದ ಬಿದ್‌ಅತ್, ನೂತನಾಚಾರಗಳನ್ನು ಬಿಟ್ಟುಬಿಡುವ ಮೂಲಕ ಅವರಿಗೆ ಸಂಪೂರ್ಣ ಹೊಂದಾಣಿಕೆಯಾಗಿ ಜೀವಿಸುವುದು ಪ್ರವಾದಿಪ್ರೇಮವನ್ನು ರುಜುವಾತು ಪಡಿಸುವ ಪ್ರಮುಖ ಪುರಾವೆಯಾಗಿದೆ. ತನಗೆ ಆಪ್ತ ಸಂಗಾತಿಗಳು, ತಾನು ಅತಿಹೆಚ್ಚು ಪ್ರೀತಿಸುವ ಜನರು ಬಿದ್‌ಅತ್ ಮತ್ತು ನೂತನಾಚಾರಗಳನ್ನು ಮಾಡುತ್ತಿದ್ದರೂ ಸಹ ಅಲ್ಲಾಹನನ್ನು ಮತ್ತು ಪ್ರವಾದಿ(ಸ) ರನ್ನು ಅನುಸರಿಸುವುದಕ್ಕಾಗಿ, ಅಲ್ಲಾಹನನ್ನು ಮತ್ತು ಪ್ರವಾದಿ(ಸ) ರನ್ನು ಪ್ರೀತಿಸುವುದಕ್ಕಾಗಿ ಬಿದ್‌ಅತ್ ಮತ್ತು ನೂತನಾಚಾರಗಳೆಲ್ಲವನ್ನೂ ತೊರೆಯಬೇಕಾದುದು ಕಡ್ಡಾಯವಾಗಿದೆ.

ಅಲ್ಲಾಹನ ಪ್ರೀತಿಯ ಬಳಿಕ ಪ್ರವಾದಿ(ಸ) ರ ಪ್ರೀತಿಯು

ಕಡ್ಡಾಯವಾಗಿದೆಯೆಂದು ಈ ಹದೀಸ್ ಸೂಚಿಸುತ್ತದೆ. ಅಲ್ಲಾಹನನ್ನು ಮತ್ತು ಪ್ರವಾದಿ(ಸ) ರನ್ನು ಪ್ರೀತಿಸಬೇಕಾದರೆ ಪ್ರವಾದಿ(ಸ) ರನ್ನು ಅನುಸರಿಸುವುದು ಮತ್ತು ಅವರ ಆಜ್ಞೆಯನ್ನು ಉಲ್ಲಂಘಿಸದಿರುವುದು ಕಡ್ಡಾಯವಾಗಿದೆ. ಪ್ರವಾದಿ(ಸ) ರವರ ಆಜ್ಞೆಗೆ ತದ್ವಿರುದ್ಧವಾಗಿ ಯಾರೇ ಏನೇ ಆಜ್ಞಾಪಿಸಿದರೂ ಆ ಆಜ್ಞೆಯನ್ನು ತಿರಸ್ಕರಿಸಿ ಪ್ರವಾದಿ(ಸ) ರನ್ನು ಅನುಸರಿಸುವುದು ಕಡ್ಡಾಯವಾಗಿದೆ. ಅಲ್ಲಾಹನನ್ನು ಪ್ರೀತಿಸುವುದು ಕಡ್ಡಾಯವಾಗಿರುವಂತೆ ಪ್ರವಾದಿ(ಸ) ರನ್ನು ಪ್ರೀತಿಸುವುದೂ ಕಡ್ಡಾಯವಾಗಿದೆ. ಅಲ್ಲಾಹು ಹೇಳುತ್ತಾನೆ: “ಅಲ್ಲಾಹು ಮತ್ತು ಅವನ ರಸೂಲರು ಒಂದು ಸಂಗತಿಯನ್ನು ತೀರ್ಮಾನಿಸಿದ ಬಳಿಕ, ಸತ್ಯವಿಶ್ವಾಸಿಗೋ, ಸತ್ಯವಿಶ್ವಾಸಿನಿಗೋ ತಮ್ಮ ವಿಷಯದಲ್ಲಿ ಯಾವುದೇ ಆಯ್ಕೆಯಿರುವುದು ಯುಕ್ತವಾದುದಲ್ಲ.”

ಹಾಫಿಝ್ ಇಬ್ನ್ ರಜಬ್ ತಮ್ಮ ಫತ್‌ಹುಲ್ ಬಾರಿ ಎಂಬ

ಗ್ರಂಥದಲ್ಲಿ ಹೇಳುತ್ತಾರೆ: “ಪ್ರವಾದಿ ಪ್ರೇಮವು ಉದ್ಭವವಾಗುವುದು ಪ್ರವಾದಿ(ಸ) ರನ್ನು, ಅವರ ಪೂರ್ಣತೆಯನ್ನು, ಅವರ ಗುಣವಿಶೇಷಣಗಳನ್ನು, ಅವರು ತಂದ ಶರೀಅತ್ತನ್ನು ಅರಿಯುವುದರಿಂದಾಗಿದೆ. ಈಗಾಗಲೇ ಹೇಳಿದಂತೆ ಅವರನ್ನು ಕಳುಹಿಸಿದವನನ್ನು (ಅಲ್ಲಾಹನನ್ನು) ಅರಿಯುವುದರಿಂದಲೂ ಪ್ರವಾದಿಪ್ರೇಮವು ಉದ್ಭವವಾಗುತ್ತದೆ. ಪ್ರವಾದಿ(ಸ) ರನ್ನು ಅನುಸರಿಸುವ ಮೂಲಕವಲ್ಲದೆ ಅಲ್ಲಾಹನಲ್ಲಿರುವ ಪ್ರೀತಿಯು ಪೂರ್ಣವಾಗುವುದಿಲ್ಲ. ಪ್ರವಾದಿ(ಸ) ರನ್ನು ಅನುಸರಿಸುವ ಮೂಲಕವಲ್ಲದೆ ಅಲ್ಲಾಹನನ್ನು ಪ್ರೀತಿಸಲು ಸಾಧ್ಯವಿಲ್ಲ. ಅಲ್ಲಾಹು ಹೇಳುತ್ತಾನೆ: “ಹೇಳಿರಿ: ನೀವು ಅಲ್ಲಾಹನನ್ನು ಪ್ರೀತಿಸುವುದಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹು ನಿಮ್ಮನ್ನು ಪ್ರೀತಿಸುವನು.” (ಆಲು ಇಮ್ರಾನ್: 31)

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014
MOB: 9731593091 / 9945171612

Jamiyathe Ahle Hadees Mangalore